# ಉಪ್ಪಿನಿಂದ ಕಲೆ..!



ಉಪ್ಪು ಊಟಕ್ಕೆ ಮಾತ್ರ ಎಂಬುದು ಎಲ್ಲರೂ ಭಾವಿಸಿರುವ ಸತ್ಯ. ಆದರೆ ಇದರಿಂದ ಮನಸೆಳೆಯುವ ಕಲೆಯನ್ನೂ ರಚಿಸಬಹುದು ಎಂದು ಜಗತ್ತಿಗೆ ತೋರಿಸಿಕೊಟ್ಟವರು ನಾರ್ವೆಯ ಕಲಾ ಶಿಕ್ಷಕ ಡಿನೊ ಟಾಮಿಕ್.

ಚಿಕ್ಕವನಿದ್ದಾಗಿನಿಂದಲೂ ಡಿನೊ ಟಾಮಿಕ್‌ನಿಗೆ ತಾನೊಬ್ಬ ಪ್ರಖ್ಯಾತ ಕಲಾವಿದನಾಗಿ ಗುರುತಿಸಿಕೊಳ್ಳಬೇಕೆಂಬ ಬಯಕೆಯಿತ್ತು. ಅದರಂತೆ ಅವನು ಸಾಕಷ್ಟು ಪ್ರಯತ್ನಗಳನ್ನೂ ಮಾಡುತ್ತಿದ್ದ. ಡ್ರಾಯಿಂಗ್ ಹಾಳೆಗಳ ಮೇಲೆ ಚಿತ್ರ ಬರೆಯುವುದು, ಮೈಮೇಲೆ ಟ್ಯಾಟೂಗಳನ್ನು ಬಿಡಿಸುವುದು.. ಮುಂತಾದವುಗಳಿಂದ ಆತ ಜನಮೆಚ್ಚುಗೆಯನ್ನೂ ಗಳಿಸಿದ್ದ. ಆದರೆ ಇಷ್ಟರಿಂದಲೇ ತಾನು ಸಾಕಷ್ಟು ಹೆಸರು ಮಾಡುವುದು ಸಾಧ್ಯವಿಲ್ಲವೆಂದು ತನ್ನ ಹದಿನೇಳನೆ ವಯಸ್ಸಿನಲ್ಲಿಯೇ ನಿರ್ಧರಿಸಿದ. ಹತ್ತೊಂಬತ್ತನೆಯ ವಯಸ್ಸಿನಲ್ಲಿ ಕಲಾಪ್ರಕಾರದಲ್ಲಿ ಅಧ್ಯಯನ ನಡೆಸಿ ಪದವಿ ಪಡೆದನು. ತನ್ನ ಇಪ್ಪತ್ತಾರನೆಯ ವಯಸ್ಸಿನಲ್ಲಿ ಡಿನೋ ಟಾಮಿಕ್ ಯಾವುದಾದರೂ ಹೊಸದೊಂದು ಕಲೆಯ ಪ್ರಕಾರವನ್ನು ಕಂಡು ಹಿಡಿಯಬೇಕು ಎಂದು ನಿರ್ಧರಿಸಿದಾಗ ಅವನಿಗೆ ಹೊಳೆದದ್ದು ಉಪ್ಪಿನ ಕಲೆ!

ಮೊದಲಿಗೆ ತನ್ನ ಹೊಸ ಕಲಾ ಪ್ರಕಾರದ ಪ್ರಚಾರಕ್ಕಾಗಿ ಡಿನೊ ಬಳಸಿಕೊಂಡಿದ್ದು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಹಾಗೂ ಟ್ವಿಟರ್ ಖಾತೆಗಳನ್ನು. ಎಲ್ಲಾ ಪ್ರಕಾರಗಳಲ್ಲಿಯೂ ಡಿನೊ ಟಾಮಿಕ್‌ಗೆ ಲಕ್ಷಕ್ಕೂ ಅಧಿಕ ಅಭಿಮಾನಿಗಳು ಬೆಂಬಲ ವ್ಯಕ್ತಪಡಿಸಿದರು. ಡಿನೋನ ಜನಪ್ರಿಯತೆಯನ್ನು ಕಂಡ ಅನೇಕ ದಿನಪತ್ರಿಕೆಗಳು, ದೂರದರ್ಶನ ವಾಹಿನಿಗಳು ಆತನನ್ನು ಸಂದರ್ಶಿಸಿ ಪ್ರಚಾರ ನೀಡಿದವು. ಇದನ್ನು ಕಂಡ ಅತಿದೊಡ್ಡ ಪೆನ್ಸಿಲ್ ಉತ್ಪಾದನಾ ಕಂಪನಿಯೊಂದು ಡಿನೋಗೆ ಪ್ರಾಯೋಜಿಕತ್ವವನ್ನು ಒದಗಿಸಿ ಸಾಕಷ್ಟು ಹಣಕಾಸಿನ ನೆರವನ್ನೂ ನೀಡಿತು. ಉಪ್ಪನ್ನು ಬಳಸಿ ಸಾಕಷ್ಟು ವ್ಯಕ್ತಿಚಿತ್ರ, ವನ್ಯಜೀವಿಗಳ ಚಿತ್ರವನ್ನು ರಚಿಸಿ ಪ್ರಸಿದ್ಧಿಯಾಗಿದ್ದಾನೆ ಡಿನೊ.

■ ಪ.ನಾ.ಹಳ್ಳಿ.ಹರೀಶ್ ಕುಮಾರ್

